# All India Radio: Bangalore
# National Bulletin In Kannada

**01.12.2025  1.10 pm.**

**<><><*><><<>**

**ಮುಖ್ಯಾಂಶಗಳು**

**೧. ಸಂಸತ್ತಿನ ಚಳಿಗಾಲ ಅಧಿವೇಶನ ಆರಂಭ ; ಉಭಯ ಸದನಗಳಲ್ಲಿ ನಿಧನರಾದ ಗಣ್ಯರಿಗೆ ಗೌರವ ನಮನ**

**೨. ಭಾರತವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಪ್ರಯತ್ನಗಳಿಗೆ ಅಧಿವೇಶನ ಉತ್ತೇಜನ - ಪ್ರಧಾನಿ ನರೇಂದ್ರ ಮೋದಿ**

**೩. ದಿತ್ವಾ ಚಂಡಮಾರುತ ಹಿನ್ನೆಲೆ ; ಸಾವಿನ ಸಂಖ್ಯೆ ಇಂಡೋನೇಷಿಯಾದಲ್ಲಿ ೪೪೨, ಶ್ರೀಲಂಕಾದಲ್ಲಿ ೩೩೪ ಕ್ಕೆ ಏರಿಕೆ**

**೪. ೨೦೨೬ರ ಎಎಫ್‌ಸಿ ೧೭ ವರ್ಷದೊಳಗಿನವರ ಏಷ್ಯನ್ ಕಪ್‌ಗೆ ಅರ್ಹತೆ ಪಡೆದ ಭಾರತದ ಪುರುಷರ ಫುಟ್ಬಾಲ್ ತಂಡ**

**<><><*><><<>**

ಸಂಸತ್ತಿನ ಚಳಿಗಾಲದ ಅಧಿವೇಶನ ಇಂದು ಆರಂಭವಾಗಿದೆ. ಬೆಳಗ್ಗೆ ೧೧ ಗಂಟೆಗೆ ಲೋಕಸಭೆ ಕಲಾಪ ಆರಂಭಗೊಂಡಾಗ ಸಭಾಧ್ಯಕ್ಷ ಓಂ ಬಿರ್ಲಾ, ಇತ್ತೀಚೆಗೆ ನಿಧನರಾದ ಕರ್ನಲ್ ಸೋನಾರಾಮ್ ಚೌಧರಿ, ನಟ ಧರ್ಮೇಂದ್ರ, ಪ್ರೊಫೆಸರ್ ವಿಜಯ್ ಕುಮಾರ್ ಮಲ್ಹೋತ್ರಾ ಮತ್ತು ರವಿ ನಾಯಕ್ ಅವರಿಗೆ ಗೌರವ ನಮನ ಸಲ್ಲಿಸಿದರು. ನಿಧನರಾದವರ ಸ್ಮರಣಾರ್ಥ ಸದನ ಮೌನ ಆಚರಿಸಿತು. ಪ್ರಶ್ನೋತ್ತರ ಕಲಾಪ ಆರಂಭವಾಗುತ್ತಿದ್ದಂತೆ ವಿರೋಧಪಕ್ಷದ ಸದಸ್ಯರು ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಅಸಮಾಧಾನ ವ್ಯಕ್ತಪಡಿಸಿ, ಘೋಷಣೆಗಳನ್ನು ಕೂಗಿದರು. ಲೋಕಸಭಾಧ್ಯಕ್ಷ ಓಂ ಬಿರ್ಲಾ, ಪ್ರತಿಭಟನಾ ನಿರತ ಸದಸ್ಯರ ವರ್ತನೆಯ ಕುರಿತು ಅಸಮಾಧಾನ ವ್ಯಕ್ತಪಡಿಸಿದರು. ಸದನದ ಕಲಾಪಗಳಿಗೆ ಅಡ್ಡಿಪಡಿಸುವುದು ಸೂಕ್ತವಲ್ಲ ಎಂದು ಹೇಳಿ, ಸುಗಮ ಕಲಾಪಕ್ಕೆ ಮನವಿ ಮಾಡಿದರೂ ವಿರೋಧ ಪಕ್ಷಗಳ ಸದಸ್ಯರು ಪ್ರತಿಭಟನೆ ಮುಂದುವರಿಸಿದರು. ಇದರ ಬೆನ್ನಲ್ಲೇ ಕಲಾಪವನ್ನು ೧೨ ಗಂಟೆಗೆ ಮುಂದೂಡಲಾಯಿತು. ರಾಜ್ಯ ಸಭೆ ಕಲಾಪ ಆರಂಭವಾಗುತ್ತಿದ್ದಂತೆ ಗುರ್ವಿಂದರ್ ಸಿಂಗ್ ಒಬೆರಾಯ್, ಚೌಧರಿ ಮೊಹಮ್ಮದ್ ರಂಜಾನ್ ಮತ್ತು ಸಜ್ಜದ್ ಅಹಮ್ಮದ್ ಕಿಚ್ಲು, ಮೇಲ್ಮನೆಯ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಿದರು. ಉಪರಾಷ್ಟ್ರಪತಿ ಹುದ್ದೆಯನ್ನು ಅಲಂಕರಿಸಿ ರಾಜ್ಯಸಭೆ ಸಭಾಪತಿಯಾಗಿ ಮೊದಲ ಬಾರಿಗೆ ಸದನವನ್ನು ನಿರ್ವಹಿಸುತ್ತಿರುವ ರಾಜ್ಯಸಭಾಪತಿ ಸಿ.ಪಿ. ರಾಧಾಕೃಷ್ಣನ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಸ್ವಾಗತ ಕೋರಿದರು.  ಈ ವೇಳೆ ಮಾತನಾಡಿದ ಪ್ರಧಾನಿ, ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಸಾಮಾನ್ಯ ಹಿನ್ನೆಲೆಯಿಂದ ಬಂದು ಉಪರಾಷ್ಟ್ರಪತಿ ಸ್ಥಾನಕ್ಕೇರಿರುವುದು ದೇಶದ ಪ್ರಜಾಪ್ರಭುತ್ವದ ನಿಜವಾದ ಶಕ್ತಿಯನ್ನು ಪ್ರತಿನಿಧಿಸುತ್ತದೆ.  ಅವರನ್ನು ಸ್ವಾಗತಿಸಲು ಸದಸ್ಯರಿಗೆ ಒಂದು ಹೆಮ್ಮೆಯ ಕ್ಷಣವಾಗಿದೆ. ಅವರ ಮಾರ್ಗದರ್ಶನದಲ್ಲಿ ಸುಗಮವಾಗಿ ಕಾರ್ಯ ನಿರ್ವಹಿಸಿ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಉಪಸಭಾಪತಿ ಹರಿವಂಶ್ ಕೂಡ ಸಿ.ಪಿ. ರಾಧಾಕೃಷ್ಣನ್ ಅವರನ್ನು ಸ್ವಾಗತಿಸಿದರು. ಒಟ್ಟು ೧೩ ಮಸೂದೆಗಳನ್ನು ಶಾಸಕಾಂಗ ವ್ಯವಹಾರದಲ್ಲಿ ಪಟ್ಟಿ ಮಾಡಲಾಗಿದ್ದು, ಇವುಗಳನ್ನು ಅಧಿವೇಶನದಲ್ಲಿ ಅಂಗೀಕಾರಕ್ಕೆ ತೆಗೆದುಕೊಳ್ಳುವ ಸಾಧ್ಯತೆಯಿದೆ. ಮಸೂದೆಗಳಲ್ಲಿ - ರಾಷ್ಟ್ರೀಯ ಹೆದ್ದಾರಿ ತಿದ್ದುಪಡಿ ಮಸೂದೆ, ಪರಮಾಣು ಶಕ್ತಿ ಮಸೂದೆ, ಕಾರ್ಪೊರೇಟ್ ಕಾನೂನುಗಳು ತಿದ್ದುಪಡಿ ಮಸೂದೆ, ವಿಮಾ ಕಾನೂನುಗಳು ತಿದ್ದುಪಡಿ ಮಸೂದೆ ಮತ್ತು ಭಾರತೀಯ ಉನ್ನತ ಶಿಕ್ಷಣ ಆಯೋಗದ ಮಸೂದೆ - ೨೦೨೫ ಸೇರಿವೆ.  ಲೋಕಸಭೆಯಲ್ಲಿ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಕೇಂದ್ರ ಅಬಕಾರಿ ತಿದ್ದುಪಡಿ ಮಸೂದೆ ಮತ್ತು ಆರೋಗ್ಯ ಭದ್ರತಾ ರಾಷ್ಟ್ರೀಯ ಭದ್ರತಾ ಸೆಸ್ ಮಸೂದೆ, ೨೦೨೫ ಅನ್ನು ಮಂಡಿಸಲಿದ್ದಾರೆ. ಇದಲ್ಲದೆ, ೨೦೨೫-೨೬ನೇ ಸಾಲಿನ ಅನುದಾನಕ್ಕಾಗಿ ಪೂರಕ ಬೇಡಿಕೆಗಳ ಮೊದಲ ಹಂತದ ಚರ್ಚೆ ಮತ್ತು ಮತದಾನವನ್ನು ಸಹ ಅಧಿವೇಶನದಲ್ಲಿ ನಡೆಸಲು ನಿರ್ಧರಿಸಲಾಗಿದೆ.

**<><><*><><<>**

ಚಳಿಗಾಲದ ಅಧಿವೇಶನ ಕೇವಲ ಒಂದು ಆಚರಣೆಯಾಗಿರದೇ ಭಾರತವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಪ್ರಯತ್ನಗಳಿಗೆ ನೀಡುವ ಉತ್ತೇಜನವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಇಂದಿನಿಂದ ಆರಂಭವಾಗಿರುವ ಸಂಸತ್ ಚಳಿಗಾಲದ ಅಧಿವೇಶನಕ್ಕೂ ಮುನ್ನ ಮಾಧ್ಯಮಗಳನ್ನುದ್ದೇಶಿಸಿ ಮಾತನಾಡಿದ ಅವರು, ಭಾರತದ ಆರ್ಥಿಕ ಪ್ರಗತಿ ಗಮನಾರ್ಹ ಎತ್ತರಕ್ಕೆ ತಲುಪುತ್ತಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವ ಹಾದಿಯಲ್ಲಿ

ಇದು ಹೊಸ ವಿಶ್ವಾಸವನ್ನು ನೀಡುತ್ತಿದೆ. ಪ್ರಜಾಪ್ರಭುತ್ವದಿಂದ ದೇಶದ ಅಭಿವೃದ್ಧಿ ಸಾಧ್ಯ ಎಂಬುದನ್ನು ಭಾರತ ಸಾಬೀತುಪಡಿಸಿದೆ ಎಂದು ತಿಳಿಸಿದ್ದಾರೆ. ಈ ಬಾರಿ ಅಧಿವೇಶನ ಸೋಲಿನಿಂದ ಹುಟ್ಟುವ ಹತಾಶೆಯ ಯುದ್ಧಭೂಮಿಯಾಗಬಾರದು ಮತ್ತು ಗೆಲುವಿನಿಂದ ಹುಟ್ಟುವ ದುರಹಂಕಾರದ ಕಣವಾಗಬಾರದು ಎಂದು ಎಲ್ಲಾ ಪಕ್ಷಗಳಲ್ಲಿ ಕೋರಿದರು. ನಕಾರಾತ್ಮಕತೆ ರಾಜಕೀಯದಲ್ಲಿ ಉಪಯುಕ್ತವಾಗಬಹುದು ಆದರೆ ಅಂತಿಮವಾಗಿ ರಾಷ್ಟ್ರ ನಿರ್ಮಾಣಕ್ಕೆ ಸಕಾರಾತ್ಮಕ ಮನಸ್ಥಿತಿಯ ಅಗತ್ಯವಿದೆ ಎಂದು ಪ್ರತಿಪಾದಿಸಿದ್ದಾರೆ.

**ಧ್ವನಿ : ಪ್ರಧಾನಿ ನರೇಂದ್ರ ಮೋದಿ (೩೧ ಸೆಕೆಂಡ್‌ಗಳು)**

**<>><><*><><<>**

ಚಳಿಗಾಲದ ಅಧಿವೇಶನದ ಮೊದಲ ದಿನದಂದು, ಸಂಸತ್ತಿನಲ್ಲಿ ಪ್ರಮುಖ ವಿಷಯಗಳನ್ನು ಚರ್ಚಿಸುವಲ್ಲಿ ಪ್ರಧಾನಿ ನರೇಂದ್ರ ಮೋದಿ ವಿಫಲರಾಗಿದ್ದಾರೆ ಎಂದು ರಾಜ್ಯಸಭಾ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ್ ಖರ್ಗೆ ಆರೋಪಿಸಿದ್ದಾರೆ. ಸಾಮಾಜಿಕ ಜಾಲ ತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಕಳೆದ ೧೧ ವರ್ಷಗಳಲ್ಲಿ ಸರ್ಕಾರವು ಸಂಸದೀಯ ಮಾನದಂಡಗಳು ಮತ್ತು ಘನತೆಯನ್ನು ಪದೇ ಪದೇ ದುರ್ಬಲಗೊಳಿಸಿದೆ ಎಂದು ದೂರಿದ್ದಾರೆ. ನಿರ್ಣಾಯಕ ವಿಷಯಗಳ ಬಗ್ಗೆ ಪ್ರಧಾನಿ ಮೌನವಾಗಿದ್ದಾರೆ ಎಂದು ತಿಳಿಸಿದ್ದಾರೆ.

**<>><><*><><<>**

ಭಾರತ ಕೇವಲ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಮಾತ್ರವಲ್ಲದೇ ಜಾಗತಿಕ ಮಟ್ಟದಲ್ಲಿ ತನ್ನ ಆರ್ಥಿಕ ಪಾತ್ರವನ್ನು ವಿಸ್ತರಿಸುವ ಹಾದಿಯಲ್ಲಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ನವದೆಹಲಿಯಲ್ಲಿ ನಡೆದ ಪಾದರಕ್ಷೆ ವಿನ್ಯಾಸ ಮತ್ತು ಅಭಿವೃದ್ಧಿ ಸಂಸ್ಥೆ -ಎಫ್‌ಡಿಡಿಐನ ಘಟಿಕೋತ್ಸವ ಸಮಾರಂಭ ಉದ್ದೇಶಿಸಿ ಮಾತನಾಡಿದ ಅವರು, ೨೦೨೪-೨೫ನೇ ಆರ್ಥಿಕ ವರ್ಷದಲ್ಲಿ ಎರಡು ಸಾವಿರದ ೫೦೦ ದಶಲಕ್ಷ ಡಾಲರ್‌ಗಳಿಗಿಂತ ಹೆಚ್ಚು ಮೌಲ್ಯದ ರಫ್ತುಗಳೊಂದಿಗೆ ಪಾದರಕ್ಷೆ ಉದ್ಯಮ ಆರ್ಥಿಕತೆಯನ್ನು ಉತ್ತೇಜಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದರು. ಮುಂದಿನ ಪೀಳಿಗೆಯ ಕೌಶಲ್ಯಪೂರ್ಣ ಯುವಕರು ೨೦೪೭ರ ವಿಕಸಿತ ಭಾರತದ ಕನಸನ್ನು ನನಸಾಗಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

**<>><><*><><<>**

ದಿತ್ವಾ ಚಂಡಮಾರುತ ಶ್ರೀಲಂಕಾದಲ್ಲಿ ಭಾರೀ ಹಾನಿಯನ್ನುಂಟು ಮಾಡಿದೆ. ಕನಿಷ್ಠ ೩೩೪ ಮಂದಿ ಮೃತಪಟ್ಟಿದ್ದಾರೆ. ಇನ್ನೂ ೩೭೦ ಮಂದಿ ಕಾಣೆಯಾಗಿದ್ದಾರೆ. ಕ್ಯಾಂಡಿ ಅತ್ಯಂತ ಹೆಚ್ಚಿನ ಹಾನಿಗೊಳಗಾದ ಜಿಲ್ಲೆಯಾಗಿದ್ದು, ಅಲ್ಲಿ ೮೮ ಜನರು ಮೃತಪಟ್ಟಿದ್ದು, ೧೫೦ಕ್ಕೂ ಹೆಚ್ಚು ಮಂದಿ ಕಾಣೆಯಾಗಿದ್ದಾರೆ. ಇನ್ನು ಭಾರೀ ಮಳೆಯ ಪ್ರವಾಹದಿಂದ ಇಂಡೋನೇಷಿಯಾದಲ್ಲಿ ಸಂಭವಿಸಿರುವ ಭೀಕರ ಪ್ರವಾಹ ಮತ್ತು ಭೂಕುಸಿತದಲ್ಲಿ ಸಾವನ್ನಪ್ಪಿದವರ ಸಂಖ್ಯೆ ೪೪೨ಕ್ಕೆ ತಲುಪಿದೆ. ಉತ್ತರ ಸುಮಾತ್ರ, ಪಶ್ಚಿಮ ಸುಮಾತ್ರ, ಅಸೆಹ್ ಪ್ರಾಂತ್ಯಗಳಲ್ಲಿ ೪೦೨ ಮಂದಿ ನಾಪತ್ತೆಯಾಗಿದ್ದಾರೆ ಹಾಗೂ ಅತಿ ಹೆಚ್ಚಿನ ಹಾನಿಗೊಳಗಾಗಿರುವ ಪ್ರದೇಶಗಳಿಗೆ ತಲುಪುವುದು ರಕ್ಷಣಾ ತಂಡಗಳಿಗೆ ಸವಾಲಾಗಿ ಪರಿಣಮಿಸಿದೆ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆ ತಿಳಿಸಿದೆ. ಹೆಚ್ಚಿನ ಹಾನಿ ಸುಮಾತ್ರ ದ್ವೀಪದಲ್ಲಿ ಕೇಂದ್ರೃಕೃತವಾಗಿದ್ದು, ಕೇಂದ್ರ ತಪನುಲಿ ಮತ್ತು ಸಿಬೊಲ್ಗಾ ನಗರಗಳು ಸಂಪೂರ್ಣವಾಗಿ ಸಂಪರ್ಕ ಕಳೆದುಕೊಂಡಿದೆ. ದಿತ್ವಾ ಚಂಡಮಾರುತದಿಂದಾಗಿ ಶ್ರೀಲಂಕಾದಲ್ಲಿ ಸಿಲುಕಿದ್ದ ೩೩೫ ಭಾರತೀಯರನ್ನು ಭಾರತೀಯ ವಾಯುಪಡೆ ತಿರುವನಂತಪುರಂಗೆ ಕರೆ ತಂದಿದೆ. ಆಪರೇಷನ್ ಸಾಗರ್ ಬಂಧು ಭಾಗವಾಗಿ ಪರಿಹಾರ ಸಾಮಾಗ್ರಿಗಳನ್ನು ತಲುಪಿಸಲು ಶ್ರೀಲಂಕಾಗೆ ಹೋಗಿದ್ದ ವಿಮಾನಗಳು ಅಲ್ಲಿ ಸಿಲುಕಿದ್ದವರನ್ನು ಕೊಲಂಬೊದಿಂದ ನಿನ್ನೆ ರಾತ್ರಿ ಸ್ಥಳಾಂತರಿಸಿದೆ.

**<>><><*><><<>**

ನವದೆಹಲಿಯಲ್ಲಿ ಇಂದು ನಡೆದ ಜೈವಿಕ ಶಸ್ತ್ರಾಸ್ತ್ರ ಸಮಾವೇಶದ ೫೦ ವರ್ಷಗಳು ; ಜಾಗತಿಕ ದಕ್ಷಿಣಕ್ಕೆ ಜೈವಿಕ ಭದ್ರತೆಯನ್ನು ಬಲಪಡಿಸುವುದು ಕುರಿತ ಸಮ್ಮೇಳನದಲ್ಲಿ ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ಭಾಗವಹಿಸಿದರು. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು, ೮೦ಕ್ಕೂ ಹೆಚ್ಚು ದೇಶಗಳ ತಜ್ಞರು, ವಿದ್ವಾಂಸರು ಮತ್ತು ಪ್ರತಿನಿಧಿಗಳೊಂದಿಗೆ ಸಮಾವೇಶವನ್ನು ಆಧುನೀಕರಿಸುವ ಬಗ್ಗೆ ಚರ್ಚೆ ನಡೆಸಲಾಗಿದೆ.

**<>><><*><><<>**

ತಮಿಳುನಾಡಿನ ಶಿವಗಂಗಾದಲ್ಲಿ ೧೨ ಜನರ ಸಾವಿಗೆ ಕಾರಣವಾದ ಬಸ್ ಅಪಘಾತದ ಕುರಿತು ಪ್ರಧಾನಿ ನರೇಂದ್ರ ಮೋದಿ ದುಃಖ ವ್ಯಕ್ತಪಡಿಸಿದ್ದು, ಗಾಯಗೊಂಡವರ ಶೀಘ್ರ ಚೇತರಿಕೆಗೆ ಪ್ರಾರ್ಥಿಸಿದ್ದಾರೆ. ಇದೇ ವೇಳೆ ಮೃತಪಟ್ಟವರ ಕುಟುಂಬಗಳಿಗೆ ತಲಾ ಎರಡು ಲಕ್ಷ ರೂಪಾಯಿ ಹಾಗೂ ಗಾಯಗೊಂಡವರಿಗೆ ೫೦ ಸಾವಿರ ರೂಪಾಯಿ ಪರಿಹಾರ ಘೋಷಿಸಿದ್ದಾರೆ.

**<>><><*><><<>**

ದೆಹಲಿ ಭಯೋತ್ಪಾದನಾ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆ - ಎನ್‌ಐಎ, ಜಮ್ಮು-ಕಾಶ್ಮೀರ ಪೊಲೀಸ್ ಮತ್ತು ಸಿಆರ್‌ಪಿಎಫ್ ಪಡೆಯ ಸಹಯೋಗದೊಂದಿಗೆ ಕಾಶ್ಮೀರದ ೧೦ ಸ್ಥಳಗಳಲ್ಲಿ ದಾಳಿ ನಡೆಸಿದೆ. ಕಾಶ್ಮೀರದ ಶೋಪಿಯಾನ್, ಕೊಯಿಲ್, ಚಂದ್‌ಗಾಮ್, ಮಲಂಗ್‌ಪೊರ, ಪುಲ್ವಾಮಾ ಸೇರಿದಂತೆ ೧೦ ಸ್ಥಳಗಳಲ್ಲಿ ಏಕಕಾಲಕ್ಕೆ ದಾಳಿ ನಡೆಸಲಾಗಿದ್ದು, ದೆಹಲಿ ಸ್ಫೋಟ ಮತ್ತು ಭಯೋತ್ಪಾದನೆಗೆ ಮಾಡ್ಯೂಲ್‌ಗೆ ಸಂಬಂಧಿಸಿದ ಪುರಾವೆಗಳ ಶೋಧ ಕಾರ್ಯಾಚರಣೆಯಲ್ಲಿ ಎನ್‌ಐಎ ತಂಡಗಳು ತೊಡಗಿವೆ.

**<>><><*><><<>**

ಅಹಮದಾಬಾದ್‌ನಲ್ಲಿ ನಿನ್ನೆ ನಡೆದ ಫುಟ್ಬಾಲ್ ಅರ್ಹತಾ ಸುತ್ತಿನ ಪಂದ್ಯದಲ್ಲಿ ಭಾರತದ ೧೭ ವರ್ಷದೊಳಗಿನವರ ತಂಡ ಇರಾನ್ ವಿರುದ್ಧ ೨-೧ ಅಂತರದ ನಿರ್ಣಾಯಕ ಗೆಲುವು ಸಾಧಿಸಿ, ೨೦೨೬ರ ಎಎಫ್‌ಸಿ ೧೭ ವರ್ಷದೊಳಗಿನವರ ಏಷ್ಯಾನ್ ಕಪ್ ಫುಟ್ಬಾಲ್ ಪಂದ್ಯಾವಳಿಗೆ ಅರ್ಹತೆ ಗಳಿಸಿದೆ. ಈ ಗೆಲುವಿಗೆ ಕೇಂದ್ರ ಸಚಿವ ಡಾ. ಮನ್ಸುಖ್ ಮಾಂಡವೀಯ ಅಭಿನಂದನೆ ಸಲ್ಲಿಸಿದ್ದಾರೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><><ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ ><><<>**